(ಆ) ಈ ಪ್ರಕಾರ ಎಲ್ಲಾ ಜಿಲ್ಲಾ ಪಂಚಾಯತ್ಗಳು ತರಬೇತಿ ಶಿಬಿರಗಳನ್ನು ನಡೆಸುತ್ತಿವೆ.

1993-94 ರಲ್ಲಿ ರಾಜ್ಯದ ವರಮಾನ

146 - ಶ್ರೀ ಜಿ. ರಾಜುಗೌಡ (ಹನೂರು) : ಮಾನ್ಯ ಯೋಜನಾ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1993-94ರಲ್ಲಿ ರಾಜ್ಯದ ಪ್ರಜೆಯ ತಲಾ ವರಮಾನ ಎಷ್ಟಿದ್ದಿತು;

ಆ) ಇದು ದೇಶದಲ್ಲಿ ಎಷ್ಟನೇ ಸ್ಥಾನ ಪಡೆದಿದೆ;

ಇ) ಚರ, ಸ್ಥಿರ ಸೊತ್ತುಗಳಿಲ್ಲದ ಕುಟುಂಬದವರ ಆದಾಯವನ್ನು ಯಾವ ಆಧಾರದ ಮೇಲೆ ಪರಿಗಣಿಸಲಾಗುತ್ತದೆ.

ಈ) ಸರ್ಕಾರದ ವಿವಿಧ ಯೋಜನೆಗಳ ಮುಖಾಂತರ ದೊರೆಯುವ ಸವಲತ್ತುಗಳನ್ನು ವಿತರಿಸುವಾಗ ಎಲ್ಲರಿಗೂ ಅನ್ವಯವಾಗುವಂತೆ ಒಂದೇ ರೀತಿಯ ಆದಾಯ ಮಿತಿಯನ್ನು ನಿಗಧಿಗೊಳಿಸುವುದು ಸೂಕ್ತವಲ್ಲವೇ?

ಶ್ರೀ ಕೆ.ಹೆಚ್. ಹನುಮೇಗೌಡ (ಯೋಜನೆ, ಅಚ್ಚುಕಟ್ಟು ಮತ್ತು ಪ್ರದೇಶಾಭಿವೃದ್ಧಿ ಸಚಿವರು) :

ಅ) 1993-94ರಲ್ಲಿ ರಾಜ್ಯದ ಪ್ರಜೆಯ ನಿರೀಕ್ಷಿತ ತಲಾ ವರಮಾನ ಚಾಲ್ತಿ ಹಾಗೂ ಸ್ಥಿರ ಬೆಲೆಗಳಲ್ಲಿ ಈ ಕೆಳಕಂಡಂತಿತ್ತು.

ಚಾಲ್ತಿ ಬೆಲೆಗಳಲ್ಲಿ (ರೂ.ಗಳಲ್ಲಿ)	ಸ್ಥಿರ (1980-81) ಬೆಲೆಗಳಲ್ಲಿ (ರೂ.ಗಳಲ್ಲಿ)
6,809-00	2,296-00

ಆ) ದೇಶದಲ್ಲಿ ಕರ್ನಾಟಕವು ತಲಾವಾರು ಆದಾಯದ ಅಂದಾಜಿನ ಪ್ರಕಾರ 1992-93ರಲ್ಲಿ ಆರನೆಯ ಸ್ಥಾನದಲ್ಲಿದೆ. 1993-94ನೇ ಸಾಲಿನ ಅಧಿಕೃತ ಅಂಕಿ ಅಂಶ ಇನ್ನೂ ಲಭ್ಯವಿರುವುದಿಲ್ಲ.

ಇ) ಚರ ಸ್ಥಿರ ಸೊತ್ತುಗಳಿಲ್ಲದ ಕುಟುಂಬದ ಆದಾಯದ ಮಾಹಿತಿಯು ದೊರೆಯುವುದಿಲ್ಲ, ಏಕೆಂದರೆ ಅರ್ಥ ವ್ಯವಸ್ಥೆಯಲ್ಲಿನ ವಲಯಗಳಾದ ಕೃಷಿ, ಅರಣ್ಯ, ಕೈಗಾರಿಕೆ ಇತ್ಯಾದಿಗಳಿಂದ ಬರುವ ಆದಾಯದ ಅಂದಾಜನ್ನು ಮೂಲ ಉದ್ಯಮಗಳ ಪ್ರಕಾರ ತಯಾರಿಸಲಾಗುತ್ತಿದೆ.

ಈ) ಇದು ಧೋರಣೆಯ ವಿಷಯ.

ವಿಧಾನ ಸೌಧದ ಸಭಾಂಗಣದ (ಬ್ಯಾಂಕ್ವೆಟ್ ಹಾಲ್) ಸೌಂದರ್ಯ ಉಳಿಸುವುದು.

298 - ಶ್ರೀ ಕೆ. ಲಕ್ಕಣ್ಣ (ರಾಜಾಜಿನಗರ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಿಧಾನ ಸೌಧವು ಅತ್ಯಂತ ನಯನಮನೋಹರ ಕಟ್ಟಡ ಎಂಬುದು ನಿಜವೆ.

ಆ) ಇದನ್ನು ನೋಡಿದ ಪ್ರತಿ ಪ್ರವಾಸಿಗನೂ ಈ ಕಟ್ಟಡ ಹಾಗೂ ಇದರ ನಿರ್ಮಾತೃವಾದ ಮಾನ್ಯ ಕೆಂಗಲ್ ಹನುಮಂತಯ್ಯನವರನ್ನು ಶ್ಲಾಘಿಸುತ್ತಿರುವುದು ನಿಜವೆ.

ಇ) ಈ ಕಟ್ಟಡದ ಒಳಭಾಗದಲ್ಲಿರುವ ಪ್ರಶಾಂತ ಹಾಗೂ ತಂಪು ಹವೆಯ ಬೃಹತ್ ಸಭಾಂಗಣ (ಬ್ಯಾಂಕ್ವೆಟ್ ಹಾಲ್)ವನ್ನು ವಿವಿಧ ಪರೀಕ್ಷೆ ಮತ್ತು ಪ್ರದರ್ಶನಗಳನ್ನು ನಡೆಸಲು ಆಗಿಂದ್ದಾಗ್ಗೆ ನೀಡುತ್ತಿರುವುದು ನಿಜವೆ.

ಈ) ಉದ್ದೇಶಕ್ಕಾಗಿ ತರುವ ಕುರ್ಚಿ ಮೇಜು ಮತ್ತಿತರ ಸಾಮಾನುಗಳನ್ನು ತಂದು ಮನಸ್ಸೇಚ್ಛೆಯಾಗಿ ಎತ್ತಿ ಹಾಕುತ್ತಿರುವುದರಿಂದ ನೆಲವೆಲ್ಲಾ ಹಾಳಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಉ) ಹಾಗಿದ್ದಲ್ಲಿ ಇನ್ನು ಈ ಸಭಾಂಗಣ (ಬ್ಯಾಂಕ್ವೆಟ್ ಹಾಲನ್ನು) ಯಾವುದೆ ರೀತಿಯ ಪರೀಕ್ಷೆಗೂ ಹಾಗು ಪ್ರದರ್ಶನಗಳಿಗೆ ನೀಡುವುದಿಲ್ಲವೆಂದು ಭರವಸೆ ನೀಡಲಾಗುವುದೆ?

ಶ್ರೀ. ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು) :

ಅ) ಹೌದು

ಆ) ಹೌದು

ಇ) ಹೌದು

ಈ) ಮತ್ತು ಉ) ರಾಜ್ಯ ಕೇಂದ್ರ ಲೋಕ ಸೇವಾ ಆಯೋಗಗಳ ವತಿಯಿಂದ ನಡೆಯುವ ಪರೀಕ್ಷೆಗಳು ಅಥವಾ ಸರ್ಕಾರದ ವತಿಯಿಂದ ನಡೆಯುವ ಪ್ರದರ್ಶನಗಳಿಗೆ ಬ್ಯಾಂಕ್ವೆಟ್ ಹಾಲ್‌ನ್ನು ನೀಡಿದ ಸಂದರ್ಭದಲ್ಲಿ ಯಾವುದೇ ಭಾರೀ ತೂಕದ ಉಪಕರಣ: ವಸ್ತುಗಳನ್ನು ಈ ಸಭಾಂಗಣಕ್ಕೆ ತರಬಾರದೆಂದೂ ಇಲ್ಲಿನ ನೆಲಕ್ಕೆ ಧಕ್ಕೆ ಆಗುವಂತಹ ಪೀಠೋಪಕರಣಗಳು: ಉಪಕರಣ ಇತ್ಯಾದಿಗಳನ್ನು ಉಪಯೋಗಿಸಬಾರದೆಂದೂ ಪ್ಲಾಸ್ಟಿಕ್ ಕುರ್ಚಿಗಳನ್ನಾಗಲಿ ಅಥವಾ ಕುರ್ಚಿ: ಮೇಜುಗಳಿಗೆ ಬುಶ್ ಇರುವ ಪೀಠೋಪಕರಣಗಳನ್ನು ಮಾತ್ರ ಉಪಯೋಗಿಸಬೇಕೆಂಬ ಷರತ್ತುಗಳನ್ನು ವಿಧಿಸಿ ನೀಡಲಾಗುತ್ತಿದೆ.

ಸೋಮವಾರಪೇಟೆ ತಾಲ್ಲೂಕು ಶುಂಠಿಕೊಪ್ಪಕ್ಕೆ ಶಾಶ್ವತ ಕುಡಿಯುವ ನೀರಿನ ಯೋಜನೆ.

33 - ಶ್ರೀ. ಎ.ಎಂ. ಬೆಳ್ಳಿಯಪ್ಪ (ಸೋಮವಾರಪೇಟೆ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸೋಮವಾರ ಪೇಟೆ ತಾಲ್ಲೂಕು ಶುಂಠಿಕೊಪ್ಪ ಗ್ರಾಮಕ್ಕೆ ಶಾಶ್ವತ ಕುಡಿಯುವ ನೀರಿನ ಯೋಜನೆ ಬಗ್ಗೆ ಸರ್ಕಾರ ಏನು ಕ್ರಮ ಕೈಗೊಂಡಿದೆ?

ಶ್ರೀ. ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು) :

ಅ) ಶುಂಠಿಕೊಪ್ಪ ಗ್ರಾಮಕ್ಕೆ ಶಾಶ್ವತ ಕುಡಿಯುವ ನೀರು ಸರಬರಾಜು ವ್ಯವಸ್ಥೆ ಒದಗಿಸಲು 1994-95ನೇ ಸಾಲಿನ ಅನುಬಂಧ-ಇ ನಲ್ಲಿ ರಾಜ್ಯ ವಲಯದ ಅಡಿಯಲ್ಲಿ ಒಂದು ಹೊಸ ನಲ್ಲಿ ನೀರು ಸರಬರಾಜು ಯೋಜನೆಯನ್ನು ರೂ. 5 ಲಕ್ಷಗಳ ಅಂದಾಜು ಮೊತ್ತದೊಂದಿಗೆ ಸೇರಿಸಲಾಗಿದೆ. ಈ ಸಾಲಿನಲ್ಲಿ ಈ ಕಾಮಗಾರಿಗೆ ರೂ. 1.31 ಲಕ್ಷ ಅನುದಾನ ನೀಡಲಾಗಿದೆ.

ಗ್ರಾಮಾಂತರ ಪ್ರದೇಶಗಳಲ್ಲಿ ತ್ರಿವರ್ಣ ಪಡಿತರ ಚೀಟಿ

160 - ಶ್ರೀ ಡಿ.ಆರ್. ಪಾಟೀಲ್ (ಗದಗ್) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ತ್ರಿವರ್ಣ ಪಡಿತರ ಕಾರ್ಡುಗಳ ವಿತರಣೆ ಗ್ರಾಮಾಂತರ ಪ್ರದೇಶಗಳಲ್ಲಿ ಸರಿಯಾಗಿ ನಡೆಯದಿರುವುದು ಹಾಗೂ ಅರ್ಹ ಫಲಾನುಭವಿಗಳಲ್ಲಿ ಅನೇಕರಿಗೆ ದೊರೆಯದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: